( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.116/2016

ದಿನಾಂಕಃ 23-06-2023, ಪಿ ಡಬ್ಲ್ಯೂ–1

ಪಾಟೀ ಸವಾಲು ಃ ಶ್ರೀ ಎಲ್ ಡಿ ಜಿ ವಕೀಲರಿಂದಃ

ಶಿವಪ್ಪ ನನಗೆ ಅಣ್ಣನಾಗಬೇಕು. ಶಿವಪ್ಪರವರು ದಾನ ಪತ್ರ ಮಾಡುವಾಗ ಅವರಿಗೆ 70 ವರ್ಷ ವಯಸ್ಸಾಗಿತ್ತು. ದಾನಪತ್ರ ಬರೆದುಕೊಟ್ಟ ನಂತರ ಶಿವಪ್ಪ ರವರು 3-4 ವರ್ಷ ಬದುಕಿದ್ದರು. ಶಿವಪ್ಪರವರು ಯಾವ ದಿನ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ನಾನು ಶಿವಪ್ಪ ರವರ ಅಂತ್ಯ ಕ್ರಿಯೆಗೆ ಹೋಗಿಲ್ಲ, ನಾನು ಆ ದಿನ ಊರಿನಲ್ಲಿ ಇರಲಿಲ್ಲ. ಸದರಿ ಶಿವಪ್ಪ ನವರು ಮೃತ ಪಟ್ಟ ವಿಚಾರ ನನಗೆ ಕೊನೆಯಲ್ಲಿ ಗೊತ್ತಾಯಿತು.

ನಾನು 9 ನೇ ತರಗತಿ ಓದಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಶಿವಪ್ಪ ರವರು ಮೃತರಾದ ವಿಚಾರ ನನಗೆ ಗೊತ್ತಾಗಲಿಲ್ಲ. ಶಿವಪ್ಪ ರವರ ಮನೆಯ ಅಕ್ಕಪಕ್ಕ ನನ್ನ ಮನೆ ಇದೆ. ನನಗೆ 3 ಜನ ಮಕ್ಕಳು. ನನ್ನ ಮಕ್ಕಳು ಊರಿನಲ್ಲಿ ವಾಸವಿರುವುದಿಲ್ಲ. ನಾನು ಮತ್ತು ನನ್ನ ಹೆಂಡತಿ ನನ್ನ ಅಣ್ಣ ಶಿವಪ್ಪರವರು ಮೃತರಾದ ದಿನ ಮೈಸೂರಿಗೆ ಹೋಗಿದ್ದೆವು. ನನ್ನ ಅಣ್ಣ ಮೃತಪಟ್ಟ ವಿಚಾರವನ್ನು ನನ್ನ ಊರಿನವರು ಯಾರೂ ತಿಳಿಸಲಿಲ್ಲ.

ನನ್ನ ಅಣ್ಣ ಬದುಕಿದ್ದಾಗ ಜಮೀನು ನನಗೆ ಬರಬೇಕೆಂದು ದಾವೆ ಹೂಡಿದ್ದರು. ನಾನು ನನ್ನ ಅಣ್ಣನನ್ನು ದಾನಪತ್ರ ಬರೆದುಕೊಟ್ಟ ನಂತರ ಯಾಕೆ ದಾವೆ ಹೂಡಿದ್ದೀಯಾ ಎಂದು ಕೇಳಿದ್ದೇನೆ. ನನ್ನ ಅಣ್ಣ ನನಗೆ ಆ ಸಂಬಂದ ಉತ್ತರ ನೀಡಲಿಲ್ಲ. ಆ ಸಮಯದಲ್ಲಿ ನನ್ನ ಅಣ್ಣನಿಗೆ ಜ್ಞಾನ ಇತ್ತು. ನಾನು ಒಬ್ಬನೇ ನನ್ನ ಅಣ್ಣ ನನ್ನು ಕೇಳಿದ್ದೇನೆ.

ನನ್ನ ಅಣ್ಣನಿಗೆ 4 ಜನ ಮಕ್ಕಳು. ನನ್ನ ಅಣ್ಣನ ಮಕ್ಕಳಿಗೆ ಓದು ಬರಹ ಸ್ವಲ್ಪ ಬರಬಹುದು. ನಾನು ದಾನಪತ್ರ ಕುರಿತು ನನ್ನ ಅಣ್ಣನ ಮಕ್ಕಳನ್ನು ಕೇಳಲಿಲ್ಲ. ನಾನು ದಾನ ಪತ್ರ ಕುರಿತು ನನ್ನ ಅಣ್ಣನ ಹೆಂಡತಿಯನ್ನು ಕೇಳಿರುತ್ತೇನೆ. ನನ್ನ ಅಣ್ಣನಿಗೆ ದಾವಾ ಆಸ್ತಿ ದತ್ತು ಸ್ವಯಾರ್ಜಿತವಾಗಿ ಬಂದಿರುತ್ತದೆ. ನನ್ನ

ಅಣ್ಣನನ್ನು ದತ್ತು ತೆಗೆದುಕೂಂಡ ತಿಮ್ಮಮ್ಮ ವೆಂಕಟೇಗೌಡ ರವರ ಸ್ವಯಾರ್ಜಿತ ಸ್ವತ್ತು. ವೆಂಕಟೇಗೌಡರಿಗೆ ದಾವಾ ಆಸ್ತಿ ಸ್ವಯಾರ್ಜಿತವಾಗಿ ಬಂದ ಬಗ್ಗೆ ನಾನು ದಾಖಲೆ ಪರಿಶೀಲಿಸಿದ್ದೇನೆ. ಸದರಿ ಆಸ್ತಿಗೆ ಸಂಬಂದಿಸಿದಂತೆ ನಾನು ಪಹಣಿಯನ್ನು ಹಾಜರುಪಡಿಸಿದ್ದೇನೆ. ತಿಮ್ಮಮ್ಮ ನನಗೆ ಅತ್ತೆಯಾಗಬೇಕು, ವೆಂಕಟೇಗೌಡರವರು ನನಗೆ ಮಾವನಾಗಬೇಕು. ಅವರು ಅಜ್ಜೂರು ಗ್ರಾಮದವರು.

ನನ್ನ ಅತ್ತಿಗೆ ಸಹಿಯನ್ನು ನಿಡಿ -1 ಕ್ಕೆ ಪಡೆದಿಲ್ಲ. ನಿಡಿ-1 ನ್ನು ಬರೆದುಕೊಡುವ ವಿಚಾರ ವಾದಿಯು ಅವರ ಮಕ್ಕಳಿಗೆ ತಿಳಿಸಿರುತ್ತಾರೆ, ಅವರ ಕೊನೆ ಮಗಳು ನೊಂದಾಣಾಧಿಕಾರಿ ಕಚೇರಿಗೆ ಬಂದಿರುತ್ತಾರೆ, ಆದರೆ ಅವರ ಗಂಡು ಮಕ್ಕಳು ಬಂದಿರುವುದಿಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ನನ್ನ ಮತ್ತು ವಾದಿಯ ನಡುವೆ ಈ ಹಿಂದೆ ಒಂದು ದಾವೆ ನಡೆಯುತಿತ್ತು ಎಂದರೆ ಸರಿ. ಸದರಿ ದಾವೆ ನನ್ನ ಮತ್ತು ಕೃಷ್ಣೇಗೌಡರ ವಿರುದ್ಧ ಹೂಡಲಾಗಿತ್ತು. ದಾವಾ ಸರ್ವೆ ನಂಬರ್ ಗೆ ಸಂಬಂದಪಟ್ಟಂತೆ ಕೃಷ್ಣೇಗೌಡರು ರಾಜಿ ಮಾಡಿಕೊಂಡರು ಎಂದರೆ ಸರಿ . ನಾನು ಆ ದಾವೆಯಲ್ಲಿ ರಾಜಿ ಮಾಡಿಕೊಂಡಿಲ್ಲ ಎಂದರೆ ಸರಿ.

ನಾನು ಪ್ರತಿವಾದ ಪತ್ರದಲ್ಲಿನ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಈ ಹಿಂದೆ ದಾವೆ ಹೂಡಿದ ಸಮಯದಲ್ಲಿ ನಾನು ಮತ್ತು ನನ್ನ ಅಣ್ಣ ಮತ್ತು ಅಣ್ಣನ ಮಕ್ಕಳು ಚೆನ್ನಾಗಿದ್ದೆವು. ನಿಡಿ -1 ನ್ನು ಬರೆದುಕೊಡುವ ಸಮಯದಲ್ಲಿ ನಾನು ನನ್ನ ಅಣ್ಣನ ಮಕ್ಕಳನ್ನು ನೋಂದಾಣಾಧಿಕಾರಿ ಕಚೇರಿಗೆ ಬರುವಂತೆ ಕರೆದಿದ್ದೆ. ನನ್ನ ಅಣ್ಣನ ಮಕ್ಕಳು ಹಾಗೂ ನನ್ನ ಅತ್ತಿಗೆ ಈಗಲೂ ನನ್ನ ಜೊತೆ ಚೆನ್ನಾಗಿದ್ದಾರೆ. ನನ್ನ ಅಣ್ಣನ ಮಕ್ಕಳನ್ನು ಕರೆದುಕೊಂಡು ಬಂದು ಈ ಪ್ರಕರಣದಲ್ಲಿ ಸಾಕ್ಷಿ ಹೇಳುತ್ತಿರಾ ಎಂದರೆ ಈಗ ಅವರು ಚೆನ್ನಾಗಿಲ್ಲದ ಕಾರಣ ಅವರು ಬರುವುದಿಲ್ಲ. ನನ್ನ ಅಣ್ಣನ ಮಕ್ಕಳು ನ್ಯಾಯಾಲಯಕ್ಕೆ ದಾವೆಯನ್ನು ಹೂಡಿದ ದಿನದಿಂದ ಚೆನ್ನಾಗಿಲ್ಲ.

ನಿಡಿ-1 ನ್ನು ಬರೆದುಕೊಡಲು ನನ್ನ ಅಣ್ಣ ಅವರೇ ಬಸ್ ನಲ್ಲಿ ನೊಂದಾಣಾಧಿಕಾರಿ ಕಚೇರಿಗೆ ಬಂದರು. ಅವರ ಜೊತೆ ಅವರ ಕಿರಿಯ ಮಗಳು ಕವಿತಾ ಬಂದಿದ್ದರು. ಸದರಿ ಕವಿತಾರವರನ್ನು ಹುಣಸೂರು ತಾಲ್ಲೂಕು, ಕಲ್ಲಳ್ಳಿ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಿರುತ್ತಾರೆ. ಸದರಿ ಕವಿತಾರವರು ನನ್ನ ಜೊತೆ ಚೆನ್ನಾಗಿದ್ದಾರೆ. ಕವಿತಾ ರವರು ಅವರ ಅಣ್ಣ ತಮ್ಮಂದಿರ ಜೊತೆ ಚೆನ್ನಾಗಿದ್ದಾರೆ. ಸದರಿ ಕವಿತಾ ರವರನ್ನು ನನ್ನ ಅಣ್ಣ ವಿಚಾರ ತಿಳಿಸಿ ಕರೆಸಿರುತ್ತಾರೆ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು